ಸಿನಿಮಾ ಎಂದರೆ ಹುಚ್ಚು. ಸಿನಿಮಾಗೆ ಸೇರಿಬಿಡುತ್ತೇನೆ ಎನ್ನುತ್ತಿದ್ದ. ಈಗ ಏನು ಮಾಡುತ್ತಿದ್ದಾನೋ?

'ನೋಡು ಸರೋಜ, ಇವನೇ ಚಿಕ್ಕ ವಯಸ್ಸಲ್ಲಿ ನನ್ನ ಬೆಸ್ಟ್ ಫ್ರೆಂಡ್. ಕೆರೆ ಕಡೆ ಹೋಗಿ ಒಟ್ಟಿಗೆ ಸಿಗರೇಟ್ ಸೇದ್ತಿದ್ವೀ. ಆಮೇಲೆ ರಾತ್ರಿ ಆಟ ಸಿನಿಮಾಕ್ಕೆ. ಮೈ ತುಂಬ ಪೌಡರ್ ಬಳ್ಕೊಂಡು ಮಲ್ ಜುಬ್ಬ ಅಂತಾ ಇದ್ದವನು ಈಗ ನೋಡು, ವೇದಪಂಡಿತನಾಗಿ, ಬೆಂಕಿಥರಾ ನಿಗಿನಿಗಿ ನಿಂತಿದ್ದಾನೆ. ಜಗತ್ತಲ್ಲಿ ಏನೆಲ್ಲಾ ಆಶ್ಚರ್ಯಗಳು ನಡೆಯುತ್ತೇ ನೋಡು!' ಎಂದು ಅನಂತು ಹೆಂಡತಿಗೆ ಹೇಳುತ್ತಿದ್ದ.

'ನೀ...ವು... ನೀನು ಈಗ ಏನು ಮಾಡ್ತಿದ್ದೀಯಾ?' ಎಂದು ಕೇಳಿದ ರಾಜಪ್ಪ.

'ಏನು ಮಾಡ್ಕೊಂಡಿದ್ದೀನಿ, ಹೊಟ್ಟೆ ಪಾಡಿಗೆ ಒಂದು ಕಂಪನಿಯಲ್ಲಿ ಇದ್ದೇನೆ. ನಾಲ್ಕು ಕಾಸು ಸಂಪಾದನೆ ಮಾಡಲು ಏನೆಲ್ಲಾ ಅನ್ಯಾಯ ಅಕ್ರಮ ಮಾಡಬೇಕೋ ಅದನ್ನೆಲ್ಲಾ ಮಾಡ್ತಾ ಇದ್ದೀನಿ. ನಿನ್ನನ್ನ ನೋಡಿದರೆ ಹೊಟ್ಟೆ ಕಿಚ್ಚಾಗ್ತಾ ಇದೇಕಣೋ ರಾಜಪ್ಪ. ಯಾರಿಗೂ ಮೋಸ ಮಾಡ್ಬೇಕಾಗಿಲ್ಲ. ಊರಲ್ಲೇ ವಾಸ. ಹಿರಿಯರು ಬರೆದಿಟ್ಟ ಮಂತ್ರ ಅನ್ನ ಹಾಕ್ತಿದೆ. ನೀನು ಪುರೋಹಿತನಾಗಲ್ವೇ ಇರೋದು? ನೀನು ಹೇಳದಿದ್ರೂ ನಿನ್ನ ವೇಷ ಹೇಳುತ್ತಲ್ಲಾ! ಗಂಧ ಚೂರ್ಣ. ಮುಖದಲ್ಲಿ ತೇಜಸ್ಸು.'


'ಚೆನ್ನಾಗಿದೆ ನೀವು ಹೀಗೆ ರಸ್ತೆಯಲ್ಲಿ ನಿಂತ್ಕೊಂಡು ಮಾತಾಡೋದು. ರೂಮಿಗೆ ಹೋಗಿ ಮಾತನಾಡೋಣ. ಬನ್ನಿ!' ಎಂದಳು ಸರೋಜ.

'ರೂಮಿಗಾ?' ಎಂದು ಕೇಳಿದ ರಾಜಪ್ಪ.

'ಹೌದು, ಅಲ್ಲಿ ಕಾಣ್ತಾ ಇದೆ ನೋಡು ಲಾಡ್ಜ್. ಅಲ್ಲೇ ಉಳ್ಕೊಂಡಿದ್ದೀವಿ. ನೀನು ಇಲ್ಲಿರೋದು ನನಗೆ ಗೊತ್ತಾಗಲಿಲ್ಲ ಕಣೋ. ಗೊತ್ತಿದ್ರೆ ಮಜವಾಗಿ ನಿನ್ನ ಮನೆಗೆ ಬಂದೇ ಉಳ್ಕೊಳ್ತಾ ಇದ್ದೆ. ನೋಡಿ, ಅಂಗಡಿಯವರೇ! ಎರಡು ಡಜನ್ ಹಣ್ಣು ಕೊಡಿ. ನಿಮ್ಮಿಂದಲೇ ನನ್ನ ಹಳೆಯ ಗೆಳೆಯನ ನೋಡೋ ಭಾಗ್ಯ ಸಿಕ್ತು' ಎಂದು ಅನಂತು ಮಾತನಾಡುತ್ತಲೇ ಇದ್ದ.

ಕೋಣೆಗೆ ಹೋದಮೇಲೆ ರಾಜಪ್ಪ ಕೇಳಿದ. 'ನೀನು ಹೇಗೆ ಈ ಊರಿನ ಕಡೆ?'

'ಹೇಳಿದರೆ ನಂಬೋದಿಲ್ಲ, ನಾನು ಸೌತ್ ಕಡೆ ಬಂದು ಹತ್ತು ವರ್ಷವಾಯ್ತು. ನನ್ನ ಹೆಂಡ್ತಿ ದಿಲ್ಲಿಯಲ್ಲಿ ಹುಟ್ಟಿ ಬೆಳೆದವಳು. ನನಗೋ ಇಲ್ಲಿ ಯಾರೂ ಇಲ್ಲ. ಈ ಕಡೆ ಬರೋ ಅವಶ್ಯಕತೆಯೇ ಇಲ್ಲದೆ ಹೋಯ್ತು. ಹಾಗೆ ಬಂದ್ರೂ ಮದರಾಸಿಗೆ ಬಂದು ಹಿಂತಿರುಗ್ತಿದ್ದೆ. ನಾನು ಸಣ್ಣ ವಯಸ್ಸಿನಿಂದ ಈ ಊರಲ್ಲೇ ಇದ್ದೆನಲ್ಲಾ, ಸರೋಜಳಿಗೆ ಒಮ್ಮೆ ತೋರಿಸೋಣಾಂತ ಬಂದೆ. ಈ ಊರಿಗೆ ಬಂದಕೂಡಲೆ ನಿನ್ನ ನೆನಪು ಬಾರದೆ ಇಲ್ಲ. ಆದರೆ ನೀನು ಎಲ್ಲಿದ್ದೀಯಾಂತ ಯಾರಿಗೆ ಗೊತ್ತು? ನಿನ್ನನ್ನ ಇಲ್ಲಿ ನೋಡ್ತೀನಿ ಅಂತ ನಾನು ಸತ್ಯವಾಗಲೂ ಅಂದು ಕೊಂಡಿರಲಿಲ್ಲ. ಅದೂ ಈ ಅವಸ್ಥೆಯಲ್ಲಿ... 'ಅವಸ್ಥೆ' ಅಂತ ತಪ್ಪಾಗಿ ಹೇಳಲಿಲ್ಲ, ನಿನ್ನನ್ನ ನೋಡಿದ್ರೆ ಹೆಮ್ಮೆ ಅಂತನಿಸುತ್ತೆ. ಅದಿರಲಿ, ನಿನಗೆ ಮದುವೆ ಆಯ್ತೇ, ಹೆಂಡತಿ ಯಾರು, ನಿನಗೆ ಎಷ್ಟು ಮಕ್ಕಳು?'



'ನನ್ನ ಹೆಂಡತಿ ವಡುವೂಟ್ ಕಡೆಯವಳು. ಮಕ್ಕಳಿಗೆ ಕೊರತೆ ಇಲ್ಲ. ಮೂರು ಹೆಣ್ಣು, ಎಲ್ಲಾ ಮದುವೆಗೆ ನಿಂತಿದ್ದಾರೆ.'

'ಮೂರು ಹೆಣ್ಣು, ಹೆಚ್ಚೆನೋ? ಜಾಮ್ ಜಾಮ್ ಅಂತ ಮದುವೆ ಆಗುತ್ತೆ, ಬಿಡು. ಭಗವತ್ ಪ್ರೀತಿ ಇದ್ರೆ ಏನು ತಾನೆ ನಡಿಯೊಲ್ಲಾ? ನನಗೆ ಒಬ್ಬನೇ ಮಗ, ಅಮೆರಿಕಾದಲ್ಲಿ ಡಾಕ್ಟರಾಗಿದ್ದಾನೆ. ಒಂದು ಹೆಣ್ಣಿದ್ದಿದ್ದರೆ ಚೆನ್ನಾಗಿರ್ತಿತ್ತು. ಆದರೆ ಆ ವಿಷಯದಲ್ಲಿ ಭಗವಂತನ ಅನುಗ್ರಹ ನಮಗಿಲ್ಲ.'

'ಏನು ನೀವೇ ಮಾತಾಡ್ತಾ ಇದ್ದೀರಲ್ಲಾ? ಅವರಿಗೆ ಏನಾದರು ತರಿಸಿ ಕೊಡಬಾರದೇ? ಕಾಫಿ ಕುಡೀತೀರಾ?' ಎಂದು ಕೇಳಿದಳು ಸರೋಜ.